ದಿನಾಂಕಃ 19/09/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲು 9 ಮತ್ತು 10 ನೇ ಪ್ರತಿವಾದಿ ಪರ ಶ್ರೀ ಹೆಚ್.ಎನ್.ಎ. ವಕೀಲರಿಂದ

26. ನನ್ನ ತಾತ ಗಂಗೇಗೌಡರವರಿಗೆ ಇಬ್ಬರು ಹೆಂಡತಿಯರು ಇದ್ದರು ಎಂದರೆ ಸರಿ. ಮೊದಲನೇ ಹೆಂಡತಿಯ ಹೆಸರು ಸಣ್ಣಮ್ಮ ಮತ್ತು ಎರಡನೇ ಹೆಂಡತಿಯ ಹೆಸರು ಮಾಳಮ್ಮ ಆಗಿರುತ್ತದೆ. ಮೊದಲನೇ ಹೆಂಡತಿ ಸಣ್ಣಮ್ಮನವರಿಗೆ ನನ್ನ ತಂದೆ ಜವರಪ್ಪ ಉಃ ಜವರೇಗೌಡ ಒಬ್ಬನೇ ಮಗ ಎಂದರೆ ಸರಿ. ಸಣ್ಣಮ್ಮ ಮತ್ತು ಜವರೇಗೌಡ ಹಾಗೂ ನನ್ನ ತಾತ ಗಂಗೇಗೌಡ ದಿನಾಂಕಃ18-11-1958 ರಲ್ಲಿ ಒಂದು ವಿಭಾಗ ಪತ್ರವನ್ನು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆ ರೀತಿ ವಿಭಾಗದ ನಂತರ ದಾವಾ ಸ್ವತ್ತುಗಳು ಟೆನೆನ್ಸಿ ಮೂಲಕ ಬಂದಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು 1976 ರಲ್ಲಿ ಟೆನನ್ಸಿ ಮೂಲಕ ದಾವಾ ಸ್ವತ್ತುಗಳು ಬಂದಿರುವುದಾಗಿ ನುಡಿಯುತ್ತಾರೆ. ಟೆನೆನ್ಸಿ ಮೂಲಕ ಬಂದ ದಾವಾ ಸ್ವತ್ತುಗಳನ್ನು ಗಂಗೇಗೌಡರು ಬದುಕಿರುವವರೆಗೆ ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿ. ಗಂಗೇಗೌಡರ ಮರಣದ ನಂತರ ಅವರ 2 ನೇ ಹೆಂಡತಿ ಮಾಳಮ್ಮ ಐ.ಸಿ.ಆರ್. ನಂ.26/82-83 ರಂತೆ ಖಾತಾ ಬದಲಾವಣೆ ಮಾಡಿಸಿಕೊಂಡಿರುತ್ತಾರೆ ಎಂದರೆ ಅದನ್ನು ಮೋಸದಿಂದ ಮಾಡಿಕೊಂಡಿರುವುದಾಗಿ ನುಡಿಯುತ್ತಾರೆ. ಸದರಿ ಐ.ಸಿ.ಆರ್. ನಂ.26/82-83 ರ ಖಾತಾ ಬದಲಾವಣೆ ಆದೇಶವನ್ನು ನಾವು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ. ಐಟಂ ನಂ.2 ರಲ್ಲಿ 1 ಎಕರೆ 30 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಮಾಳಮ್ಮನ ಜೀವಿತ ಕಾಲದಲ್ಲಿ ಶಂಕರ ಮತ್ತು ಮಲ್ಲೇಶರವರುಗಳು ವಿಭಾಗ ಪತ್ರ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ ಐಟಂ ನಂ.2 ರ ಸ.ನಂ.256 ಸ್ವತ್ತು 2 ಪೋಡುಗಳಾಗಿರುತ್ತದೆ ಆದರೆ ಅವು 3 ಪೋಡುಗಳಾಗಿರುತ್ತವೆ ಎಂದರೆ ಸರಿಯಲ್ಲ. ಸ.ನಂ.256/1 ರಲ್ಲಿ 10 ಗುಂಟೆ ವಿಸ್ತೀರ್ಣವು ಭೂಪರಿವರ್ತನೆ ಆಗಿರುತ್ತದೆ ಎಂದರೆ ಸರಿಯಲ್ಲ ಮತ್ತು ಸದರಿ ಜಾಗವು 8 ನೇ ಪ್ರತಿವಾದಿ ಮಲ್ಲೇಶರವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಸ.ನಂ.256/2 ರಲ್ಲಿ ಮಲ್ಲೇಶರವರ ಹೆಸರಿನಲ್ಲಿ 15 ಗುಂಟೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸ.ನಂ.256/3 ರಲ್ಲಿ 1 ಎಕರೆ 5 ಗುಂಟೆ 7 ನೇ ಪ್ರತಿವಾದಿ ಶಂಕರರವರ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ಸ.ನಂ.256/1 ರಲ್ಲಿ ಮಲ್ಲೇಶರವರು ಒಂದು ವಾಸದ ಮನೆ ಕಟ್ಟಿಸಿಕೊಂಡಿರುತ್ತಾರೆ ಎಂಬ ಪ್ರಶ್ನೆಗೆ ಒಟ್ಟು ಕುಟುಂಬದಲ್ಲಿದ್ದಾಗ ಕಟ್ಟಿಸಿರುತ್ತಾರೆ ಎಂದು ನುಡಿಯುತ್ತಾರೆ. ಅ ಜಾಗದಲ್ಲಿ 4 ಮಳಿಗೆಗಳು ಇರುತ್ತವೆ ಎಂದರೆ ಸರಿ. ಮಳಿಗೆಗಳನ್ನು ಎಷ್ಟು ವರ್ಷಗಳ ಹಿಂದೆ ಕಟ್ಟಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ಸ.ನಂ.256/1 ರಲ್ಲಿ 10 ಗುಂಟೆಯಲ್ಲಿ ಒಂದು ನಿವೇಶವನ್ನು ಮಲ್ಲೇಶರವರು 9 ಮತ್ತು 10 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 9 ಮತ್ತು 10 ನೇ ಪ್ರತಿವಾದಿಗಳಿಗೆ ಸದರಿ ನಿವೇಶನ ಖಾತಾ ಬದಲಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. 9 ಮತ್ತು 10 ನೇ ಪ್ರತಿವಾದಿಗಳು ನಿವೇಶನ ಖರೀದಿಸಿದ ನಂತರ ಖಾತಾ ಬದಲಾವಣೆ ಮಾಡಿಸಿಕೊಂಡು ನಿವೇಶನದ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. 9 ಮತ್ತು 10 ನೇ ಪ್ರತಿವಾದಿಗಳಿಗೆ

8 ನೇ ಪ್ರತಿವಾದಿ ನಿವೇಶನ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 9 ಮತ್ತು 10 ನೇ ಪ್ರತಿವಾದಿಗಳು ಖರೀದಿಸಿರುವ ನಿವೇಶನದ ಮೇಲೆ ನನಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಅವರಿಗೆ ತೊಂದರೆ ಮಾಡುವ ಉದ್ದೇಶದಿಂದ ಈ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. 1958 ರಲ್ಲಿ ವಿಭಾಗ ಮಾಡಿಕೊಂಡ ನಂತರ ಅವರ ಹಿಸ್ಸೆಗೆ ಬಂದಿರುವ ಸ್ವತ್ತಿನಲ್ಲಿ ಒಂದು ಮನೆ ಮತ್ತು ಹಿತ್ತಲನ್ನು ದಿನಾಂಕಃ11-02-1970 ರಲ್ಲಿ ನನ್ನ ತಾತ ಗಂಗೇಗೌಡರಿಗೆ ನನ್ನ ತಂದೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
(ನಾಗೇಶ ಮೂರ್ತಿ ಬಿ.ಕೆ.)
ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅರಕಲಗೂಡು.